
ಪಂತುಲುರವರು ತಮ್ಮ 'ದುಡ್ಡೇ ದೊಡ್ಡಪ್ಪ' ಚಿತ್ರದ ಪ್ರಿವ್ಯೂ ಏರ್ಪಡಿಸಿದಾಗ ಅಂದಿನ ರಾಜ್ಯಪಾಲ ವಿ.ವಿ. ಗಿರಿಯವರು ಮುಖ್ಯ ಅತಿಥಿಯಾಗಿದ್ದರು. ಅವರು ಈ ರೀತಿ ತಮ್ಮ ಹೊಸ ಚಿತ್ರವನ್ನು ಪರಿಚಯಿಸುವ ಸಂಪ್ರದಾಯ ಹುಟ್ಟುಹಾಕಿದ್ದರು. ಕಾಲ ಸರಿದಂತೆ ಇಂದು ಚಿತ್ರರಂಗದಲ್ಲಾಗಿರುವ ಬದಲಾವಣೆ ಧಾಳವಾಗಿ ಕಂಡುಬರುತ್ತಿದೆ. ಚಿತ್ರಮಂದಿರಗಳು ಕೆಲವು ಪ್ರದರ್ಶನವಿಲ್ಲದೆ ಮೌನವಾಗಿ ನಿಂತಿವೆ. ಕೆಲವನ್ನು ಒಡೆಯಲಾಗಿದೆ. ಇನ್ನೂ ಕೆಲವು ಚಿತ್ರಮಂದಿರಗಳು ಅಲ್ಪಸ್ವಲ್ಪ ಪ್ರೇಕ್ಷಕರಿಂದ ಕೊನೆ ಉಸಿರು ಹಿಡಿದುಕೊಂಡಂತೆ ಕಳಾಹೀನವಾಗಿ ಸೊರಗುತ್ತಿವೆ.

ಈಗ ಬೆಂಗಳೂರಿನ ಗಾಂಧೀನಗರಕ್ಕೆ ಬರೋಣ. ಅಂದು ಗಾಂಧೀನಗರ ಚಿತ್ರ ವಿತರಕರಿಂದ ಶೋಭಿಸುತ್ತಿತ್ತು. ಗಾಂಧೀನಗರದಲ್ಲಿ ಪ್ರಖ್ಯಾತ ಚಿತ್ರ ಹಂಚಿಕೆದಾರರಾಗಿ ವಿ.ಪಿ.ಸಿ. ಫಿಲಂಸ್, ವಿಜಯಾ ಪಿಕ್ಚರ್ಸ್, ಎವರ್‌ಶೈನ್ ಡಿಸ್ಟ್ರಿಬ್ಯೂಟರ್ಸ್, ಹಿಂದಿ ಸಿನಿಮಾಗಳಿಗೆ ಮೀಸಲಾದ ಮಾಂಡ್ರೆ ಪಿಕ್ಚರ್ಸ್ – ಹೀಗೆ ಘಟಾನುಘಟಿ ಹಂಚಿಕೆದಾರರಿದ್ದರು. ಸಿನಿಮಾ ಥಿಯೇಟರ್ ಮಾಲೀಕರುಗಳು ಇವರೊಡನೆ ಚಿತ್ರ ಪ್ರದರ್ಶಿಸುವ ದಿನಾಂಕ, ಪರ್ಸಂಟೇಜ್ ಗೊತ್ತುಪಡಿಸಿಕೊಳ್ಳಬೇಕಿತ್ತು. ಈ ಘಟಾನುಘಟಿಗಳ ನಡುವೆ ಒಂದೊಂದೇ ಚಿತ್ರಗಳ 'ಡಬ್ಬಾ' ಇಟ್ಟುಕೊಂಡಿರುತ್ತಿದ್ದ ಗ್ರೇಟ್ ಇಂಡಿಯಾ ಫಿಲಂಸ್, ಹೀರಾ ಪಿಕ್ಚರ್ಸ್‌ಗಳ ಮಾಲೀಕರುಗಳೂ ಅಲ್ಲಿದ್ದರು. ಉದ್ಯಮದ ದೊಡ್ಡವರು, ಚಿಕ್ಕವರು ಗಾಂಧೀನಗರವೆಂಬ ಚಿತ್ರನಗರಿಯಲ್ಲಿ ಸಹಬಾಳ್ವೆ ನಡೆಸುತ್ತಿದ್ದರು.

ಗಾಂಧೀನಗರದಲ್ಲಿ ನಾಟಕ ಕ್ಷೇತ್ರದ ಅಧ್ವರ್ಯು ಗುಬ್ಬಿ ವೀರಣ್ಣನವರ ಮಾಲೀಕತ್ವದ ಒಂದು ನಾಟಕ ಮಂದಿರವಿತ್ತು. ಇಲ್ಲಿ ಗುಬ್ಬಿ ಕಂಪನಿಯ 'ಲವಕುಶ', 'ಅಣ್ಣ ತಂಗಿ' ನಾಟಕಗಳನ್ನು ನೋಡಿದೆ.

ನನ್ನ ಹೈಸ್ಕೂಲ್ ದಿನಗಳಲ್ಲಿ ಗಾಂಧಿನಗರದ ಮಧ್ಯದಲ್ಲಿದ್ದ ದೊಡ್ಡ ಬಂಗಲೆಯೊಂದರಲ್ಲಿ ಭೀಕರ ಕೊಲೆ ನಡೆದುಹೋಗಿತ್ತು. ಆ ಭಯಂಕರ ಘಟನೆಯಲ್ಲಿ ಅತ್ಯಾಶ್ಚರ್ಯಕರವಾಗಿ ಬದುಕುಳಿದ ಇಬ್ಬರು ಸಹೋದರಿಯಲ್ಲಿ ಒಬ್ಬರು ಮುಂದೆ ಕಾಲೇಜಿನಲ್ಲಿ ನನ್ನ ಸಹಪಾಠಿಯಾಗಿದ್ದರು. ಆ ಬಂಗಲೆ ಇಂದು ಮಾಯವಾಗಿ ಮಾಮೂಲಿ ಕಟ್ಟಡವೊಂದು ಎದ್ದಿದೆ. ಬೆಂಗಳೂರು ಕಾಲೇಜುಗಳ ನಗರ. ಸೆಂಟ್ರಲ್ ಕಾಲೇಜು, ಅದರೆದುರಿಗೆ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು, ಮೆಡಿಕಲ್ ಕಾಲೇಜುಗಳು, ನ್ಯಾಷನಲ್ ಕಾಲೇಜು, ಹುಡುಗಿಯರಿಗೆ ಮಹಾರಾಣಿ ಕಾಲೇಜ್, ಇಂದಿಗೂ ಫ್ಯಾಷನ್‌ಗೆ ಹೆಸರಾಗಿರುವ ಮೌಂಟ್‌ಕಾರ್ಮಲ್ ಕಾಲೇಜ್ ಮತ್ತು ಇನ್ನೆಷ್ಟೊ.

ನನಗೆ ಅನುಭವಕ್ಕೆ ಬಂದಷ್ಟು ಹೇಳಿದರೂ ಅಂದಿನ ಬೆಂಗಳೂರಿನ ಚಿತ್ರ ಅಪೂರ್ಣವೇ ಸರಿ. ಬೆಂಗಳೂರಿನ ಉತ್ಸವಗಳು, ಹಲಸೂರಿನ ದೇವರ ಹೂವಿನ ಪಲ್ಲಕ್ಕಿ, ಧರ್ಮರಾಯನ ಕರಗ, ಕಾರ್ತಿಕದಲ್ಲಿ ಕಡ್ಲೆಕಾಯಿ ಪರಿಷೆ, ಬಗೆಬಗೆಯ ರುಚಿಕಟ್ಟಾದ ತಿಂಡಿಗಳನ್ನು ಒದಗಿಸುತ್ತಿದ್ದ ಹೋಟೆಲ್‌ಗಳು, ಎಂ.ಜಿ. ರೋಡಿನಲ್ಲಿ ಇಂಗ್ಲಿಷ್ ಮಾದರಿ ತಿಂಡಿ ತೀರ್ಥಗಳಿಗೆ ಕೋಶಿಸ್ ಪರೇಡ್ ಕೆಫೆ, ಇಂಡಿಯಾ ಕಾಫಿ ಹೌಸ್....



ಕೆಂಪೇಗೌಡ ರಸ್ತೆಯ ಸಿನಿಮಾ ಸುವರ್ಣಕಾಲದ ಒಂದು ನೆನಪು.

ಇಷ್ಟೆಲ್ಲಾ ನೆನಸಿಕೊಂಡರೂ ಬೃಹತ್ ಬೆಂಗಳೂರಿನ ಬಗ್ಗೆ ಶಿಲ್ಕು ಉಳಿದಿದೆ. ಅಂದು ಮಲ್ಲೇಶ್ವರಂ ಅಂದರೆ ಸಾಹಿತಿ ಜಿ.ಪಿ. ರಾಜರತ್ನಂ, ಬ್ಯೂಗಲ್‌ರಾಕ್, ಗವಿಪುರಂ, ಗುಟ್ಟಹಳ್ಳಿ; ಗಾಂಧೀಬಜಾರ್–ಬಸವನಗುಡಿ ಅಂದರೆ ಮಾಸ್ತಿ, ಡಿ.ವಿ.ಜಿ., ಕವಿ ನಿಸಾರ್ ಅಹಮದ್, ಲಂಕೇಶ್ ಮುಂತಾದವರು. ನಿಸಾರ್ ಅಹಮದ್‌ರಂತೂ 'ಮನಸು ಗಾಂಧಿ ಬಜಾರು' ಎಂದು ಕವಿತೆಯನ್ನೇ ಬರೆದಿದ್ದಾರೆ. ಇಷ್ಟೆಲ್ಲಾ ನನ್ನ ಅನುಭವಕ್ಕೆ ಬಂದಷ್ಟು ಹೇಳಿದರೂ ಅಂದಿನ ಬೆಂಗಳೂರಿನ ಚಿತ್ರ ಅಪೂರ್ಣವೇ ಸರಿ. ಬಳೆಪೇಟೆ, ಚಿಕ್ಕಪೇಟೆ, ರಾಣಾಸಿಂಗ್‌ಪೇಟೆ, ಚಾಮರಾಜಪೇಟೆ ಇನ್ನೂ ಮುಂತಾದ ಪೇಟೆಗಳ ಚಹರೆ, ಕಬ್ಬನ್‌ಪಾರ್ಕ್, ಲಾಲ್‌ಬಾಗ್, ಬನಪ್ಪ ಪಾರ್ಕ್, ಕಬ್ಬನ್‌ಪಾರ್ಕ್, ಸಿಟಿ ಮಾರ್ಕೆಟ್, ರಸೆಲ್ ಮಾರ್ಕೆಟ್ ಇವುಗಳ ಬಗ್ಗೆ ಕಂಡು ಉಂಡವರು ಹೇಳಬೇಕು.

ಈಗಿನ ದಿನಗಳಲ್ಲಿ ಅಂದಿನ ಬೆಂಗಳೂರಿನ ಚಿತ್ರವನ್ನು ಯಾರೋ ಅಳಿಸಿ ಹಾಕಿದಂತಿದೆ. ವಿಶಾಲವಾದ ಗಾಳಿ ಬೆಳಕುಗಳಿಂದ ಕೂಡಿದ ಮನೆಗಳು ಮಾಯವಾಗಿವೆ. ಬೆಂಗಳೂರಿನಲ್ಲಿ ಎಲ್ಲ ವರ್ಗದವರಿಗೆ ತಕ್ಕಂತಿದ್ದ ಛತ್ರಗಳು, ಪರೋಪಕಾರದ ಎಚ್ಚರವಿದ್ದ ಮಹನೀಯರು ಕಟ್ಟಿಸಿದ್ದ ಧರ್ಮಾರ್ಥ ಆಸ್ಪತ್ರೆಗಳು ಶಿಥಿಲಾವಸ್ಥೆ ತಾಳಿವೆ, ಇಲ್ಲವೇ ಮಾಯವಾಗಿವೆ. ಎಲ್ಲಿ ನೋಡಿದರೂ ಬೃಹತ್ ಕಟ್ಟಡಗಳು, ಅಪಾರ್ಟ್‌ಮೆಂಟ್‌ಗಳು ತಾವೇ ತಾವಾಗಿವೆ.

ಅಂದು ಇಂದು ಎಂದು ಹೋಲಿಸುವುದು ಮನುಷ್ಯ ಸಹಜ ಗುಣ. ಇಂದು ಬೆಂಗಳೂರಿನಾಚೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರಿನಲ್ಲಿ, ರೈತರ ವ್ಯವಸಾಯದ ಭೂಮಿ ವಿಮಾನ ಹಾರುವ, ಇಳಿಯುವ ನಿಲ್ದಾಣವಾಗಿದೆ. ಇದು ಇಂದಿನ ಜೀವನಾವಶ್ಯಕ ಸೌಲಭ್ಯ. ನಮ್ಮ ಚಿಕ್ಕಂದಿನಲ್ಲಿ ಏರೊಡ್ರೊಮ್‌ಗೆ ಕರೆದುಕೊಂಡು ಹೋಗಿರೆಂದು ತಂದೆಯವರನ್ನು ಪೀಡಿಸುತ್ತಿದ್ದೆವು. ಆಗ ವಿಮಾನ ನಿಲ್ದಾಣ ಬೆಂಗಳೂರಿನ ಇನ್ನೊಂದು ದಿಕ್ಕಿನ ಯಮಲೂರಿನ ಸಮೀಪವಿತ್ತು. ನಿರಾಡಂಬರವಾಗಿ ಸಾಲಾದ ಕ್ಲಾಸ್ ರೂಮಿನಂತೆ ಕಟ್ಟಿದ ವಿಮಾನ ನಿಲ್ದಾಣ. ಈ ರೂಮ್‌ಗಳ ಹೊರಗಿನ ವರಾಂಡ ಪ್ರಯಾಣಿಕರು ಕೂರುವ ಸ್ಥಳವಾಗಿತ್ತು. ನಾನು ಮೊದಲು ನೋಡಿದ ವಿಮಾನ ಒಂದು ಡಕೋಟಾ ವಿಮಾನ. ಅದು ಮುಖ ಮೇಲೆತ್ತಿ ಓತಿಕ್ಯಾತನಂತೆ ನಿಲ್ಲುತ್ತಿತ್ತು. ನಂತರ ಫ್ರೆಂಡ್‌ಶಿಪ್, ವೈಕೌಂಟ್, ಜೆಟ್ ವಿಮಾನಗಳು ಬಂದವು. ಆವಿಷ್ಕಾರ, ಅನುಕೂಲಗಳು ಹೆಚ್ಚಾದಂತೆ ಸರಳವಾಗಿದ್ದ ವ್ಯವಹಾರವೆಲ್ಲಾ ಸಂಕೀರ್ಣವಾಗತೊಡಗಿತು.

ಹೇಳಬೇಕಾದ್ದು ಇನ್ನೂ ಇದ್ದೇ ಇರುವುದರಿಂದ ಇದೊಂದು ಅಪೂರ್ಣ ಚಿತ್ರ. ಒಮ್ಮೊಮ್ಮೆ ಈ ಎಲ್ಲ ಬದಲಾವಣೆಗಳಿಗೆ ಕಾರಣಗಳೇನು ಎಂದು ಯೋಚಿಸುವಂತಾಗುತ್ತದೆ. ಈಗಿನ ಜನಸಂಖ್ಯಾ ಬಾಹುಳ್ಯ, ಐಷಾರಾಮಿ ಜೀವನದ ಸೆಳೆತ, ಕೈಗಾರೀಕರಣ, ನಗರೀಕರಣ, ಸಾಫ್ಟ್‌ವೇರ್ ಎಂಬ ಹೊಸವೃತ್ತಿ, ಹೊರಗಿನಿಂದ ಬಂದು ನಗರದಲ್ಲಿ ನೆಲೆ ನಿಲ್ಲುವ ಜನಸಂಖ್ಯೆ, ಹೀಗೆ ಕಂಡದ್ದು ಕಾಣದ್ದು ಬೇಕಾದಷ್ಟು ಅಂಶಗಳು ಇವೆ. ನನ್ನಂತಹವರಲ್ಲಿ ಬೆಂಗಳೂರು ವೇಗದ ಜಗತ್ತಿನ ಒಂದು ಮಿತಿ ಮೀರಿದ ವಿಸ್ತರಣೆ, ಕಲುಷಿತ ವಾತಾವರಣದ ನಗರವಾಗುತ್ತಿದೆ ಎನ್ನುವ ವಿಷಾದವೂ ಇದೆ.

ಪ್ರತಿಕ್ರಿಯಿಸಿ: feedback@sudha.co.in